ಹಣವನ್ನು ಕೊಡಿಸುವುದರ ಬಗ್ಗೆ ಇದೆ. ರಾಜೀವ್‌ರವರೆ ತಾವು ಹೇಳಿರುವುದು relevant ಇದೆ. ತಮ್ಮ ಮಾತುಗಳನ್ನು ಮುಕ್ತಾಯ ಮಾಡಿ.

ಶ್ರೀ ಪಿ. ರಾಜೀವ್:– ಸರ್ಕಾರ ಈಗ ಕಬ್ಬು ಬೆಳೆಗಾರರಿಗೆ ಕಾರ್ಖಾನೆ ಮಾಲೀಕರಿಂದ ಬಾಕಿ ಹಣವನ್ನು ಕೊಡಿಸಬೇಕು. ಇದು ಸಾಧ್ಯವಾಗಲಿಲ್ಲವೆಂದರೆ ತಕ್ಷಣ ಸರ್ಕಾರ payment ಅನ್ನು ಮಾಡಿ ತದನಂತರ ಕಾರ್ಖಾನೆ ಮಾಲೀಕರಿಂದ recovery ಮಾಡಿಕೊಳ್ಳಬೇಕೆನ್ನುವಂಥ ಒತ್ತಾಯವನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಇವತ್ತಿಗೆ ಚರ್ಚೆ ಸಾಕು. ಒಂದು ಪ್ರಕಟಣೆಯಿದೆ ಅದನ್ನು ಓದಿಬಿಡುತ್ತೇನೆ.

8. ಪ್ರಕಟಣೆ

ದಿನಾಂಕ 08–12–2014 ರಂದು ಆಳಂದ ತಾಲ್ಲೂಕಿನ ವ್ಯಸನ ಮುಕ್ತ ವೇದಿಕೆಯ ಕಾರ್ಯಕರ್ತರು ಹಮ್ಮಿಕೊಂಡಿದ್ದ ಮೆರವಣಿಗೆ ಹಾಗೂ ಅಬಕಾರಿ ಭವನದ ಎದುರುಗಡೆ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಆಳಂದ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್‌ರವರನ್ನು ಮಧ್ಯಾಹ್ನ 2 ಗಂಟೆ 15 ನಿಮಿಷಕ್ಕೆ ಪೋಲಿಸ್ ವಶಕ್ಕೆ ತೆಗೆದುಕೊಂಡು ನಂತರ K.P. Act Colum 71 ರ ಪ್ರಕಾರ ಅದೇ ದಿನ ಮಧ್ಯಾಹ್ನ 3 ಗಂಟೆ 30 ನಿಮಷಕ್ಕೆ ಬಿಡುಗಡೆ ಮಾಡಲಾಗಿರುತ್ತೆಂದು ಪೋಲಿಸ್ ಅಧೀಕ್ಷಕರ, ಕಲ್ಬುರ್ಗಿ, ಇವರು ತಿಳಿಸಿರುತ್ತಾರೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 35 ನಿಮಿಷಕ್ಕೆ ಮುಕ್ತಾಯ ಮಾಡಿ ಮತ್ತೆ ದಿನಾಂಕ 10–12–2014 ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)